# ನಮೂನೆ-XII

ನಿಯಮ 14(3)

ಶಿವಸ್ವಾಮಿ.ಬಿ ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ, ನಂ.8, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು-560 052 ಇವರ ಚುನಾವಣಾ ನಡವಳಿ.

ಈ ಮಹಾಮಂಡಳದ ಆಡಳಿತ ಮಂಡಳಿ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ದಿ: 11-09-2022 ರ ಭಾನುವಾರ ಬೆಳಿಗ್ಗೆ 9-00 ಗಂಟೆಯಿಂದ ಅಪರಾಹ್ನ 4-00 ಗಂಟೆಯವರೆಗೆ ಈ ಸಹಕಾರ ಮಹಾಮಂಡಳದ ಕಛೇರಿಯಲ್ಲಿ ನಡೆಸಲಾಗುವುದೆಂದು ಈ ಕೆಳಗಿನಂತೆ ಚುನಾವಣಾ ಪ್ರಕಟಣೆ ನೀಡಲಾಗಿದೆ.

| | | |
|---|---|---|
| 1 | ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ ಪ್ರಾರಂಭ | ದಿನಾಂಕ:29-08-2022ರಿಂದ ಪ್ರತಿ ದಿನ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3-00 ವರೆಗೆ ಮಹಾಮಂಡಳದ ಕಛೇರಿಯಲ್ಲಿ |
| 2 | ಅಭ್ಯರ್ಥಿಗಳಿಂದ ನಾಮಪತ್ರ ಸ್ವೀಕರಿಸುವ ಕೊನೆ ದಿನಾಂಕ ಮತ್ತು ಸಮಯ (ನಿಯಮ 14 ಎ) | ದಿ: 03-09-2022 ಶನಿವಾರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3-00 ಗಂಟೆಯವರೆಗೆ |
| 3 | ನಾಮಪತ್ರಗಳ ಪರಿಶೀಲನೆ- ರಿಟರ್ನಿಂಗ್ ಅಧಿಕಾರಿಗಳಿಂದ (ನಿಯಮ 14 ಬಿ) | ದಿ: 04-09-2022 ಭಾನುವಾರ ಬೆಳಿಗ್ಗೆ 11-00 ಗಂಟೆಯಿಂದ ಮಹಾಮಂಡಳದ ಕಛೇರಿಯಲ್ಲಿ |
| 4 | ರಿಟರ್ನಿಗ್ ಅಧಿಕಾರಿಯಿಂದ ಕ್ರಮಬದ್ಧ ನಾಮಪತ್ರ ಸಲ್ಲಿಸಿದ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ 14 ಬಿ (4) | ದಿ: 04-09-2022 ಭಾನುವಾರ ಬೆಳಿಗ್ಗೆ 11-00 ಗಂಟೆಯಿಂದ ಮಹಾಮಂಡಳದ ಕಛೇರಿಯಲ್ಲಿ |
| 5 | ಸ್ಪರ್ಧಾ ಕಣದಲ್ಲಿರುವ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ವಾಪಸ್ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ (ನಿಯಮ 14-ಸಿ) | ದಿ:05-09-2022 ಸೋಮವಾರ ಮದ್ಯಾಹ್ನ 3-00 ಗಂಟೆಯವರೆಗೆ |
| 6 | ಸ್ಪರ್ಧಾ ಕಣದಲ್ಲಿ ಉಳಿದ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ ರಿಟರ್ನಿಂಗ್ ಅಧಿಕಾರಿಗಳಿಂದ (ನಿಯಮ 14 ಡಿ) | ದಿ:05-09-2022 ಸೋಮವಾರ ಮದ್ಯಾಹ್ನ 3-00 ಗಂಟೆಯ ನಂತರ |
| 7 | ಅಗತ್ಯವಾದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆ ಹಂಚಿಕೆ ಮಾಡುವುದು (ನಿಯಮ 14 ಇ) | ದಿ:05-09-2022 ಸೋಮವಾರ ಮದ್ಯಾಹ್ನ 3-00 ಗಂಟೆಯ ನಂತರ |

| | | |
|---|---|---|
| 8 | ಚಿಹ್ನೆ ಸಹಿತ ಸ್ಪರ್ಧೆಯಲ್ಲಿರುವ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ (14 ಇ & ಎಫ್) | ದಿ: 08-09-2022<br>ಗುರುವಾರ<br>ಪೂರ್ವಹ್ನ 11-00 ಗಂಟೆಗೆ |
| 9 | ಚುನಾವಣೆ ನಡೆಸಲು ಚುನಾವಣಾ ದಿನಾಂಕ ಮತ್ತು ವೇಳೆ ಮತ್ತು ಸ್ಥಳ | ದಿ: 11-09-2022<br>ಭಾನುವಾರ<br>ಬೆಳಿಗ್ಗೆ 9-00 ಗಂಟೆಯಿಂದ<br>ಸಂಜೆ 4-00 ಗಂಟೆಯವರೆಗೆ<br>ಮಹಾಮಂಡಳದ ಕಛೇರಿಯಲ್ಲಿ |
| 10 | ಮತ ಎಣಿಕೆಯ ದಿನಾಂಕ ಮತ್ತು ವೇಳೆ | ದಿ: 11-09-2022<br>ಭಾನುವಾರ<br>ಸಂಜೆ 4-00 ಗಂಟೆಯ ನಂತರ<br>ಮಹಾಮಂಡಳದ ಕಛೇರಿಯಲ್ಲಿ |
| 11 | ಚುನಾವಣೆಯ ಫಲಿತಾಂಶ ಘೋಷಣೆ - ರಿಟರ್ನಿಂಗ್ ಅಧಿಕಾರಿಗಳಿಂದ | ದಿ: 11-09-2022<br>ಭಾನುವಾರ<br>ಮತ ಎಣಿಕೆ ಮುಗಿದ ನಂತರ<br>ಮಹಾಮಂಡಳದ ಕಛೇರಿಯಲ್ಲಿ |

<u>ಸೂಚನೆಗಳು</u>

1. ಈ ಮಹಾಮಂಡಳದ ಬೈಲಾ ಸಂಖ್ಯೆ 28 ಅಧ್ಯಾಯ 5ರನ್ವಯ ಪ್ರಾಂತವಾರು ಒಟ್ಟು 20 ನಿರ್ದೇಶಕರನ್ನು ಆಯ್ಕೆ ಮಾಡತಕ್ಕದ್ದು.

| | |
|---|---|
| ಬೆಂಗಳೂರು ಪ್ರಾಂತ | 05 ನಿರ್ದೇಶಕರು |
| ಮೈಸೂರು ಪ್ರಾಂತ | 05 ನಿರ್ದೇಶಕರು |
| ಬೆಳಗಾವಿ ಪ್ರಾಂತ | 05 ನಿರ್ದೇಶಕರು |
| ಕಲಬುರಗಿ ಪ್ರಾಂತ | 04 ನಿರ್ದೇಶಕರು |
| ಬಿ ವರ್ಗದ ಸದಸ್ಯ ಮತ ಕ್ಷೇತ್ರ-ರಾಜ್ಯವ್ಯಾಪಿ | 01 ನಿರ್ದೇಶಕ |
| ಒಟ್ಟು | 20 ನಿರ್ದೇಶಕರು |

2. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳ 2013ರಲ್ಲಿ ಪ್ರಕಟವಾದ ನಿಯಮ 14 ರ ಪ್ರಕಾರ ಚುನಾವಣೆಗೆ ಸ್ಪರ್ಧಿಸಲು ಇಷ್ಟಪಡುವ ಅಭ್ಯರ್ಥಿಗಳು ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹತೆ ಹೊಂದಿರುವ ಒಬ್ಬ ಸದಸ್ಯರ ಸೂಚನೆಯೊಂದಿಗೆ ನಾಮಪತ್ರಗಳನ್ನು ಸಲ್ಲಿಸಬೇಕು. ಅನರ್ಹ ಸದಸ್ಯರ ಸಹಿಯೊಂದಿಗೆ ಸೂಚಿಸಿದ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.
3. ಒಬ್ಬ ಸದಸ್ಯ ಒಬ್ಬ ಅಭ್ಯರ್ಥಿಯನ್ನು ಮಾತ್ರ ಸೂಚಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ಸೂಚಿಸಿದ್ದಲ್ಲಿ ಮೊದಲು ಸೂಚಿಸಿರುವ ಅಭ್ಯರ್ಥಿಯ ನಾಮಪತ್ರವನ್ನು ಅಂಗೀಕರಿಸಿ, ನಂತರ ಸಲ್ಲಿಸಿದ ನಾಮ ಪತ್ರಗಳನ್ನು ತಿರಸ್ಕರಿಸಲಾಗುವುದು.
4. ಚುನಾವಣೆಗೆ ಸ್ಪರ್ಧಿಸ ಬಯಸುವ ಅಭ್ಯರ್ಥಿಗಳು ತಮ್ಮ ನಾಮಪತ್ರದಲ್ಲಿ ತಾವು ಯಾವ ಪ್ರಾಂತದ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಲಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು.

5. ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಸಹಕಾರ ಕಾಯಿದೆಯಲ್ಲಿ, ನಿಯಮಗಳಲ್ಲಿ ಮತ್ತು ಮಹಾಮಂಡಳದ ಉಪ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರಬೇಕು. ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಸಹಕಾರ ಕಾಯಿದೆಯಲ್ಲಿ, ನಿಯಮಗಳಲ್ಲಿ ಮತ್ತು ಮಹಾಮಂಡಳದ ಉಪ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅನರ್ಹತೆಗಳನ್ನು ಹೊಂದಿರತಕ್ಕದ್ದಲ್ಲ.
6. ನಿಯಮ 14(ಎ)ರ ಪ್ರಕಾರ ಚುನಾವಣೆಗೆ ಸ್ಪರ್ಧಿಸುವ ಪ್ರತಿಯೊಬ್ಬ ಸಾಮಾನ್ಯ ಅಭ್ಯರ್ಥಿಯು ಮಹಾಮಂಡಳದ ಹೆಸರಿಗೆ ರೂ.5000/- ಗಳನ್ನು ಚುನಾವಣಾ ಠೇವಣಿಯಾಗಿ ಸಲ್ಲಿಸಬೇಕು. ಹಾಗೂ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಠೇವಣಿಯನ್ನು ನಾಮ ಪತ್ರವನ್ನು ಸಲ್ಲಿಸುವ ಪೂರ್ವದಲ್ಲಿ ಮಹಾಮಂಡಳದಲ್ಲಿ ಠೇವಣಿ ಹಣ ಸಂದಾಯ ಮಾಡಿ ರಸೀದಿಯನ್ನು ಲಗತ್ತಿಸಬೇಕು. ಚುನಾವಣಾ ಠೇವಣಿಯನ್ನು ಸಂದಾಯ ಮಾಡದೆ ಸಲ್ಲಿಸುವ ನಾಮ ಪತ್ರಗಳನ್ನು ತಿರಸ್ಕರಿಸಲಾಗುವುದು. ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು ಅರ್ಹ ಮತಗಳ 1/6 ರಷ್ಟು ಮತಗಳನ್ನು ಪಡೆಯದ ಅಭ್ಯರ್ಥಿಗಳ ಹಾಗೂ 1/10 ರಷ್ಟು ಮತಗಳನ್ನು ಪಡೆಯದ ಅಭ್ಯರ್ಥಿಗಳ ಚುನಾವಣಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
7. ನಾಮ ಪತ್ರಗಳ ಪರಿಶೀಲನೆ ಸಮಯದಲ್ಲಿ ಅಭ್ಯರ್ಥಿಗಳು ಅಥವಾ ಅವರ ಸೂಚಕರು ಹಾಜರಿರಬಹುದು.
8. ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸುವ ಸದಸ್ಯರು ನಾಮಪತ್ರಗಳನ್ನು ಸಂಘದ ಕೆಲಸದ ವೇಳೆಯಲ್ಲಿ ಪಡೆಯಬಹುದು.
9. ನಾಮ ಪತ್ರಗಳನ್ನು ಹಾಗೂ ಅವುಗಳನ್ನು ವಾಪಸ್ಸು ಪಡೆಯುವ ನಾಮಪತ್ರದ ಅರ್ಜಿಗಳನ್ನು ರಿಟರ್ನಿಂಗ್ ಅಧಿಕಾರಿಗಳಿಗೆ/ಸಹಾಯಕ ರಿಟರ್ನಿಂಗ್ ಅಧಿಕಾರಿಗಳಿಗೆ ಖುದ್ದಾಗಿ ಸಲ್ಲಿಸತಕ್ಕದ್ದು.
10. 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮ 14(ಇ) ಪ್ರಕಾರ ರಿಟರ್ನಿಂಗ್ ಅಧಿಕಾರಿಯವರು ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳಿಗೆ (ರಾಷ್ಟ್ರೀಯ ಪಕ್ಷಗಳ ಮತ್ತು ಕರ್ನಾಟಕ ರಾಜ್ಯದ ಪ್ರಾದೇಶಿಕ ಪಕ್ಷಗಳ ಚಿಹ್ನೆಗಳನ್ನು ಹೊರತುಪಡಿಸಿ) ಚುನಾವಣಾ ಚಿಹ್ನೆ ನೀಡಲು ಅಧಿಕಾರ ಹೊಂದಿರುತ್ತಾರೆ.
11. ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನದಿಂದ ಚುನಾವಣೆ ಮುಗಿಯುವವರೆಗೆ ಸಾರ್ವಜನಿಕ ರಜಾ ದಿನಗಳಂದು ಸಹ ಸಂಘದ ಕಛೇರಿಯು ತೆರೆದಿರುತ್ತದೆ.
12. ನಿಗದಿತ ಸಮಯ ಮತ್ತು ಅವಧಿಯ ನಂತರ ನೀಡುವ ನಾಮಪತ್ರಗಳನ್ನು ಯಾವುದೇ ಕಾರಣದಿಂದಲೂ ಸ್ವೀಕರಿಸುವುದಿಲ್ಲ.
13. ಸದಸ್ಯರು ಮತ ಚಲಾಯಿಸಲು ಮತಗಟ್ಟೆಗೆ ಬರುವಾಗ ಮಹಾಮಂಡಳದಿಂದ ವಿತರಿಸಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.
14. ಆಡಳಿತ ಮಂಡಳಿ ನಿರ್ದೇಶಕರಾಗಿ ಚುನಾಯಿತರಾಗಲು ಕಾಯಿದೆ ಮತ್ತು ನಿಯಮಗಳು ಹಾಗೂ ಸಂಘದ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರತಕ್ಕದ್ದು.

ಸ್ಥಳ : ಬೆಂಗಳೂರು
ದಿನಾಂಕ: 22-08-2022

(ಶಿವಸ್ವಾಮಿ.ಬಿ. ಕ.ಆ.ಸೇ) 22/8/22
ರಿಟರ್ನಿಂಗ್ ಅಧಿಕಾರಿ
ಕರ್ನಾಟಕ ರಾಜ್ಯ ಸಹಕಾರ ಮಾರಾಟ
ಮಹಾಮಂಡಳ ನಿಯಮಿತ, ಬೆಂಗಳೂರು
ಹಾಗೂ ಜಂಟಿ ನಿರ್ದೇಶಕರು, ಪೌರಾಡಳಿತ
ನಿರ್ದೇಶನಾಲಯ, ಬೆಂಗಳೂರು.